ದಿಃ30-06-14 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು

ಪಾಟೀ ಸವಾಲುಃ ಶ್ರೀ ಜಿಡಿಟಿ ವಕೀಲರಿಂದಃ

ನಾನು ಈ ದಾವೆಯನ್ನು ನಾನು ಕಟ್ಟಿರುವ ಮನೆಗೆ ದಾವೆ ಮಾಡಿದ್ದೇನೆ. ನನ್ನ ಮನೆಯ ಖಾತೆ ನಂಬರ್ ಜ್ಞಾಪಕ ಇರುವುದಿಲ್ಲ. ನಾನು ನಿವೇಶನಕ್ಕೆ ಸಂಬಂಧಪಟ್ಟಂತೆ ದಾವೆ ಮಾಡಿರುವುದಿಲ್ಲ ,ನಾನು ನನ್ನ ಮನೆಗೆ ಸಂಬಂಧಪಟ್ಟಂತೆ ದಾವೆ ಮಾಡಿರುತ್ತೇನೆ. ನನ್ನ ಮನೆ ಉತ್ತರ-ದಕ್ಷಿಣ ಸು.40ಅಡಿ ವಿಸ್ತೀರ್ಣ ,ಪೂರ್ವ-ಪಶ್ಚಿಮ 20ಅಡಿ ವಿಸ್ತೀರ್ಣ ಇರುತ್ತದೆ. ನನ್ನ ತಂದೆ ನಾವು 4ಜನರಿಗೂ 4ಮನೆಯನ್ನು ಕೊಟ್ಟಿರುತ್ತಾರೆ. ನನ್ನ ಭಾಗಕ್ಕೆ ಬಂದ ಮನೆಯ ಪಕ್ಕದಲ್ಲಿ ಖಾಲಿ ನಿವೇಶನ ಇದ್ದು ಅದರಲ್ಲಿ ನಾನು ಮನೆಯನ್ನು ಕಟ್ಟಿರುತ್ತೇನೆ. ನಾನು ಕಟ್ಟಿರುವ ಮನೆ ವ್ಯಾಜ್ಯದ ಸ್ವತ್ತು ಆಗಿರುತ್ತದೆ.

ನನ್ನ ತಂದೆ ನಮಗೆ ಮನೆಗಳನ್ನು ಹಂಚಿಕೆ ಮಾಡಿದಾಗ ಪೂರ್ವಭಾಗಕ್ಕೆ ಮೊದಲು ನನ್ನ ಮನೆ ಬಂದಿರುತ್ತದೆ. ನನ್ನ ಮನೆಯ ಪಶ್ಚಿಮಕ್ಕೆ ಪ್ರತಿವಾದಿ ಮನೆ ಬರುತ್ತದೆ ಎಂದರೆ ಸರಿ. ನನ್ನ ಮನೆಯ ಖಾತೆ ಸಂಃ31ಃ1 ಆಗಿದೆ ಎಂದರೆ ಸರಿ. ನನ್ನ ತಂದೆಯಿಂದ ಬಂದ ಮನೆಯ ಬಾಗಿಲು ದಕ್ಷಿಣಕ್ಕೆ ಇರುತ್ತದೆ. ನಾನು ಕಟ್ಟಿದ ಮನೆಗೆ ದಕ್ಷಿಣ ಮತ್ತು ಪೂರ್ವಕ್ಕೆ ಬಾಗಿಲು ಇದೆ. ನನ್ನ ತಂದೆ ಕೊಟ್ಟಿರುವ ಮನೆಯ ಪೂರ್ವಕ್ಕೆ ಮೂರು ಕಣಜದ ಮನೆಗಳು ಇರುತ್ತದೆ ಎಂದರೆ ಸರಿ, ಅವುಗಳನ್ನು ನಾನೇ ಕಟ್ಟಿಸಿದ್ದೇನೆಂದು ಹೇಳಿದ್ದಾರೆ. ಸದರಿ 3ಕಣಜದ ಮನೆಗಳ ಪೂರ್ವದ ದಿಕ್ಕಿನಲ್ಲಿ ಬಾಗಿಲುಗಳು ಇರುತ್ತದೆ ಎಂದರೆ ಸರಿ. ಮೂರು ಕಣಜದ ಮನೆಗಳಿಗೆ ಹೊಂದಿಕೊಂಡಂತೆ ಪೂರ್ವ ದಿಕ್ಕಿನಲ್ಲಿ ದನ ಕಟ್ಟಲು ಹೆಂಚಿನ ವಪ್ಪಾರು ಹಾಕಿದ್ದೇವೆಂದರೆ ಸರಿ. ಸದರಿ ಹೆಂಚಿನ ವಪ್ಪಾರಿಗೆ ಪೂ-ದಕ್ಷಿಣದ ದಿಕ್ಕಿನಲ್ಲಿ ಮಾತ್ರ ಬಾಗಿಲು ಇರುತ್ತದೆ ಎಂದರೆ ಸರಿ. ಸದರಿ ಪೂರ್ವದಲ್ಲಿರುವ ಬಾಗಿಲು ಪೂರ್ವ ಮತ್ತು ಉತ್ತರದ ಮೂಲೆಯಲ್ಲಿದೆ ಎಂದರೆ ಸರಿ.

ಹೆಂಚಿನ ವಪ್ಪಾರದ ಪೂರ್ವ ದಿಕ್ಕಿನಲ್ಲಿರುವ ಬಾಗಿಲು ಕಣಜದ ಮನೆಯ ಬಾಗಿಲು ಒಂದಕ್ಕೊಂದು ನೇರವಾಗಿರುತ್ತವೆ ಎಂದರೆ ಸರಿ. ಹೆಂಚಿನ ಮನೆಯ ವಪ್ಪಾರದಲ್ಲಿ ಅಡ್ಡಲಾಗಿ ಒಂದು ಗೋಡೆಯನ್ನು ಹಾಕಿರುತ್ತೇನೆ. 3ಕಣಜದ ಮನೆಗಳಲ್ಲಿ ಉತ್ತರಕ್ಕೆ ಇರುವ ಕಣಜದ ಮನೆ ಮತ್ತು ಅದಕ್ಕೆ ಲಗತ್ತಾಗಿರುವ ವಪ್ಪಾರವನ್ನು ಪ್ರತಿವಾದಿಗೆ, ಮತ್ತೊಂದು ಕಣಜದ ಮನೆಯನ್ನು ಚಂದ್ರಗಿರಿಯಪ್ಪನವರು ಅನುಭವಿಸುತ್ತಿರುತ್ತಾರೆಂದರೆ ಸರಿಯಲ್ಲ. ನಾನು ಕೇವಲ ದಕ್ಷಿಣಕ್ಕೆ ಇರುವ ಒಂದು ಕಣಜದ ಮನೆಯನ್ನು ಅನುಭವಿಸುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನೇ 3ಕಣಜದ ಮನೆಗಳನ್ನು ಅನುಭವಿಸುತ್ತಿದ್ದೇನೆಂದು ಹೇಳಿದ್ದಾರೆ. ಚಂದ್ರಗಿರಿಯಪ್ಪ ಮತ್ತು ನಾನು ಅನುಭವಿಸುತ್ತಿರುವ ಕಣಜದ ಮನೆಯ ಪೂರ್ವದ ದಿಕ್ಕಿನಲ್ಲಿರುವ ವಪ್ಪಾರವನ್ನು ನಾನು ಅನುಭವಿಸುತ್ತಿದ್ದೇನೆಂದರೆ ಸರಿಯಲ್ಲ., ಸಾಕ್ಷಿ

ಮುಂದುವರೆದು ಎಲ್ಲಾ ಹೆಂಚಿನ ವಪ್ಪಾರಗಳನ್ನು ನಾನೇ ಅನುಭವಿಸುತ್ತಿದ್ದೇನೆಂದು ಹೇಳುತ್ತಾರೆ. ಪೂ.ಕ್ಕೆ-ನಾಗರಾಜು, ನಾಗಣ್ಣ ಮತ್ತು ಚಂದ್ರಗಿರಿಯಪ್ಪನವರ ಕಣಜದ ಮನೆ, ಪ.ಕ್ಕೆ- ನಾಗರಾಜು ರವರ ಮನೆ, ಉ.ಕ್ಕೆ -ನಾಗೋಜಯ್ಯನವರ ಜಮೀನು, ದ.ಕ್ಕೆ- ದಾರಿ ಈ ಚಕ್ಕುಬಂದಿ ಒಳಗೆ ಯಾವ ಮನೆ ಇದೆ ಎಂದರೆ ಸಾಕ್ಷಿಯು ನನ್ನ ತಂದೆ ನನಗೆ ಮನೆ ಕೊಟ್ಟಿದ್ದು ಅದರ ಪೂರ್ವದಲ್ಲಿ ಮನೆಯನ್ನು ಕಟ್ಟಿರುತ್ತೇನೆಂದು ಹೇಳಿರುತ್ತಾರೆ.

ಪೂ.ಕ್ಕೆ -ರಸ್ತೆ , ಪ.ಕ್ಕೆ-ವಾದಿ ವಾಸದ ಮನೆ , ಉ.ಕ್ಕೆ -ನಾಗರಾಜಪ್ಪನವರ ಜಮೀನು , ದ.ಕ್ಕೆ- ಚಂದ್ರಗಿರಿಯಪ್ಪನವರ ಕಣಜದ ಮನೆ ಇದ್ದು , ಈ ಚಕ್ಕುಬಂದಿಯ ಮಧ್ಯದಲ್ಲಿರುವ ಮನೆಯು ಯಾರೆಂದರೆ ಸಾಕ್ಷಿಯು ಚಂದ್ರಗಿರಿಯಪ್ಪನವರಿಗೆ ಕಣಜದ ಮನೆ ಇರುವುದಿಲ್ಲ ಅದು ನನ್ನದೇ ಆಗಿರುತ್ತದೆ. ಮೇಲೆ ಹೇಳಿದ ಚಕ್ಕುಬಂದಿಯಲ್ಲಿ ಪ್ರತಿವಾದಿಗಳಿಗೆ ಸೇರಿದ ಹೆಂಚಿನ ಮನೆ ಮತ್ತು ಕಣಜದ ಮನೆ ಇರುತ್ತದೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಚಕ್ಕುಬಂದಿಗೆ ಪ್ರತಿವಾದಿಯು ಪಂಚಾಯತಿ ಮುಖಾಂತರ ಮ್ಯುಟೇಷನ್ ಮಾಡಿಸಿಕೊಂಡಿದ್ದಾರೆ ಎಂದರೆ, ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎನ್ನುತ್ತಾರೆ. ಪ್ರತಿವಾದಿಯು ಮಂಡಲ ಪಂಚಾಯತಿಯಿಂದ ಖಾತೆ , ಪಹಣಿ ಮಾಡಿಸಿಕೊಂಡಿದಾಗಿನಿಂದಲೂ ಮೇಲೆ ಹೇಳಿದ ಚಕ್ಕುಬಂದಿಯಲ್ಲಿ ಸ್ವಾಧೀನದಲ್ಲಿ ಇದ್ದಾನೆಂದರೆ ಸರಿಯಲ್ಲ. ಮಂಡಲ ಪಂಚಾಯತಿಯವರು ನನ್ನ ಹೆಸರಿಗೆ ಪೂರ್ವ-ಪಶ್ಚಿಮ-13ವರೆ ಅಡಿ, ಉತ್ತರ-ದಕ್ಷಿಣಕ್ಕೆ-38ವರೆ ಅಡಿ ವಿಸ್ತೀರ್ಣಕ್ಕೆ ಖಾತೆ, ಪಹಣಿ ಮಾಡಿಕೊಟ್ಟಿದ್ದು ಅಷ್ಟರಲ್ಲಿ ಮಾತ್ರ ನಾನು ಸ್ವಾಧೀನದಲ್ಲಿ ಇದ್ದೇನೆಂದರೆ ಸರಿಯಲ್ಲ. ದಾವಾ ಶೆಡ್ಯೂಲ್‌ನಲ್ಲಿ ಹೇಳಿರುವ 20 ಇಂಟು 40ಅಡಿ ವಿಸ್ತಿರ್ಣ ಮನೆ ನನಗೆ ಸೇರಿದ್ದು ಎಂದು ತೋರಿಸಲು ಪಾರಿಕತ್ತನ್ನು ಹಾಜರುಪಡಿಸಿದ್ದೇನೆ. ಪಾರಿಕತ್ತಿನಲ್ಲಿ ಒಬ್ಬರಿಬ್ಬರಿಗೆ ಎಷ್ಟು ಎಷ್ಟು ವಿಸ್ತೀರ್ಣ ಎಂದು ಬರೆದಿದ್ದಾರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ ಆದರೆ ಮನೆಯನ್ನು ಬರೆದಿರುತ್ತಾರೆ. ಪಾರಿಕತ್ತಿನಲ್ಲಿ ಖಾತೆ ನಂಬರ್ ಬರೆದಿರುತ್ತಾರೋ ಅಥವಾ ಸರ್ವೆನಂಬರ್ ಬರೆದಿರುತ್ತಾರೋ ಎಂದು ನನಗೆ ಗೊತ್ತಿರುವುದಿಲ್ಲ. ನಾನು ತಪ್ಪು ವಿಸ್ತೀರ್ಣವನ್ನು ಕೊಟ್ಟು ಸುಳ್ಳು ದಾವೆಯನ್ನು ಮಾಡಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ ಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿ ಇಲ್ಲಾ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಒಳಗಡೆ ಪ್ರತಿವಾದಿ ಪೂರ್ವ-ಪಶ್ಚಿಮ 12ಅಡಿ ,ಉತ್ತರ-ದಕ್ಷಿಣ 19ಅಡಿ ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ. ಪ್ರತಿವಾದಿ ದನ ಕಟ್ಟಲು ಜಾಗವನ್ನು ಬಿಟ್ಟುಕೊಡಲು ಕೇಳಿರುತ್ತಾರೆಂದು ನಾನು ಈ ದಾವೆಯನ್ನು ಮಾಡಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ,

ಸಿ ಜೆ ಕೊರಟಗೆರೆ